**2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು**

**ಜೆ.ಎಂ.ಎಫ್.ಸಿ. ನ್ಯಾಯಾಲಯ, ಹುಬ್ಬಳ್ಳಿ.**

**ದಿಃ 03.06.2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಭೋದಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ 4 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ.ಎಂ ಎಸ್ ಬಿ ವಕೀಲರಿಂದಃ**

5. ಒಟ್ಟು ಮೊಕ್ತಿಯಾರ ಪತ್ರವನ್ನು ಪ್ರಶ್ನೀಸಿ ದಾವೆ ಸಲ್ಲಿಸಿದ ಬಗ್ಗೆ ನನ್ನ ತಮ್ಮ ಬಸವರಾಜ ನನಗೆ ಹೇಳಿದ್ದರು. ನಾನು ಹಾಗೂ ಪ್ರತಿವಾದಿ ನಂ.1 ರಿಂದ 3 ರವರು ಖುಷಿಯಾಗಿ ಹಾಗೂ ಆತ್ಮೀಯತೆಯಿಂದ ಇದ್ದೇವೆ. ಪ್ರತಿವಾದಿ ನಂ.1 ರಿಂದ 3 ಏನು ಆಸ್ತಿಗಳ ವ್ಯವಹಾರ ಮಾಡುತ್ತಾರೆ ಆ ಬಗ್ಗೆ ನನಗೆ ಗೊತ್ತು ಹಾಗೂ ನಾನು ಮಾಡಿದ ಆಸ್ತಿಯ ವ್ಯವಹಾರಗಳ ಬಗ್ಗೆ ಅವರಿಗೆ ಗೊತ್ತಿರುತ್ತದೆ. ಒಟ್ಟು ಮೊಕ್ತಿಯಾರ ಪತ್ರ ಪ್ರಶ್ನಿಸಿ ಯಾವ ನ್ಯಾಯಾಲಯದಲ್ಲಿ ದಾವೆ ಸಲ್ಲಿಸಿರುತ್ತದೆ ಹಾಗೂ ಅದರ ನಂಬರ ಏನು ಎಂದು ಪ್ರತಿವಾದಿ ನಂ.2 ಮತ್ತು 3 ಇವರ ಹತ್ತಿರ ವಿಚಾರಿಸಲಿಲ್ಲ. ಸದರಿ ದಾವೆಯಲ್ಲಿ ನಾನು ಸಹ ಪಕ್ಷಗಾರಳಾಗಿದ್ದೇನು. ಸದರಿ ದಾವೆಯಲ್ಲಿ ನಾನು ಪ್ರತಿವಾದ ಪತ್ರ ಸಲ್ಲಿಸಿ ನನ್ನ ಸಹೋದರರು ಮೇತ್ರಾಣಿ ಇವರಿಗೆ ಒಟ್ಟು ಮೊಕ್ತಿಯಾರ ಪತ್ರ ಬರೆದುಕೊಟ್ಟಿಲ್ಲ ಎಂದು ನಾನು ಯಾವುದೇ ಪರಿಹಾರ ಕೇಳಿಲ್ಲ. ಸದರಿ ಒಟ್ಟು ಮೊಕ್ತಿಯಾರ ಪತ್ರ ಪ್ರಶ್ನಿಸಿ ಸಲ್ಲಿಸಲಾಗಿದೆ ಎಂದು ಹೇಳಲಾದ ದಾವೆ ಸುಮಾರು 10 ರಿಂದ 15 ವರ್ಷ ಹಳೇಯದು ಎಂದರೆ ಸಾಕ್ಷಿ ನನಗೆ ನೆನಪಿಲ್ಲ ಎನ್ನುತ್ತಾರೆ. ಪ್ರಸ್ತುತ ದಾವೆ ಸಲ್ಲಿಸಬೇಕಾದರೆ ನಾನು ಹಾಗೂ ಪ್ರತಿವಾದಿ ನಂ.1 ರಿಂದ 3 ಚರ್ಚಿಸಿಯೇ ದಾವೆ ಸಲ್ಲಿಸಿರುತ್ತೇನೆ. ಈ ದಾವೆ ಸಲ್ಲಿಸಬೇಕಾದರೆ ಪ್ರತಿವಾದಿ ನಂ.1 ಮತ್ತು 2 ಸೇರಿಯೇ ನನಗೆ ಈ ದಾವೆಯ ದಾಖಲೆಗಳನ್ನು ತೆಗೆಯಿಸಿ ಕೊಟ್ಟಿರುತ್ತಾರೆ. ಈ ದಾವೆ ಸಲ್ಲಿಸಲು ಪ್ರತಿವಾದಿ ನಂ.1 ಮತ್ತು 2 ಇವರ ಸಂಪೂರ್ಣ ಕೈವಾಡ ಇದೆ ಎಂದರೆ ನಿಜ.

6. ನನ್ನ ತಂದೆ ಜೀವಿತವಿರುವಾಗಲೇ ನನ್ನ ಹಾಗೂ ಪ್ರತಿವಾದಿಯರ ಮಧ್ಯ ವಾಟ್ನಿ ಪತ್ರ ಆಗಿರುತ್ತದೆ. ಸದರಿ ವಾಟ್ನಿ ಪತ್ರವನ್ನು ನಾನು ಪ್ರಸ್ತುತ ದಾವೆಯಲ್ಲಿ ಅಥವಾ ಇನ್ನೊಂದು ದಾವೆ ಸಲ್ಲಿಸಿ ಪ್ರಶ್ನೀಸಿರುವುದಿಲ್ಲ. ನನ್ನ ತಂದೆ ಜೀವಂತವಿರುವಾಗ ನನ್ನ ಸಹೋದರರರು ಉಳಿದ ಆಸ್ತಿಗಳಲ್ಲಿ ಮಾಡಿಕೊಂಡ ವಾಟ್ನಿ ಪತ್ರದ ವಿಷಯ ನನ್ನ ತಂದೆ ಜೀವಿತವಿರುವಾಗಲೇ ನನಗೆ ಗೊತ್ತಿತ್ತು. ಸದರಿ ವಾಟ್ನಿ ಪತ್ರ ಮಾಡುವಾಗ ದಾವಾ ಆಸ್ತಿಯನ್ನು ಈಗಾಗಲೇ ಪ್ರತಿವಾದಿ ನಂ.4 ಇವರಿಗೆ ಮಾರಾಟ ಮಾಡಿದ ಕಾರಣ ಅದನ್ನು ಸದರಿ ವಾಟ್ನಿ ಪತ್ರದಲ್ಲಿ ಸೇರ್ಪಡೆ ಮಾಡಿರಲಿಲ್ಲ ಎಂಬ ಸೂಚನೆಗೆ ಸಾಕ್ಷಿ ಖರೀದಿಗೆ ಕೊಟ್ಟಿರಲಿಲ್ಲ ಎಂದು

ನುಡಿಯುತ್ತಾರೆ. ಪ್ರಸ್ತುತ ದಾವಾ ಆಸ್ತಿ ಸದರಿ ವಾಟ್ನಿ ಪತ್ರದಲ್ಲಿ ಸೇರ್ಪಡೆಯಾಗಿಲ್ಲ. ನಿಮ್ಮ ತಂದೆ ಮಾಡಿಕೊಂಡ ವಾಟ್ನಿ ಪತ್ರ ಸುಮಾರು 15-20 ವರ್ಷಗಳಾಗಿರುತ್ತದೆ ಎಂದರೆ ಸರಿ. ನನ್ನ ತಂದೆ ತೀರಿಕೊಂಡ ನಂತರ ನನ್ನ ಸಹೋದರರು ಸಹ ವಾಟ್ನಿ ಪತ್ರ ಮಾಡಿಕೊಂಡಿರುತ್ತಾರೆ. ಅವರು ವಾಟ್ನಿ ಮಾಡಿಕೊಂಡು ಸುಮಾರು 10-12 ವರ್ಷಗಳಾಗಿರುತ್ತವೆ ಎಂದರೆ ಸರಿ. ಸದರಿ ವಾಟ್ನಿ ಮಾಡಿಕೊಂಡ ವಿಷಯ ನನಗೆ ಗೊತ್ತಿರುತ್ತದೆ. ಸದರಿ ವಾಟ್ನಿ ಪತ್ರದಲ್ಲಿ ದಾವಾ ಆಸ್ತಿಯನ್ನು ಸೇರ್ಪಡೆ ಮಾಡಿಲ್ಲ ಎಂದರೆ ಸಾಕ್ಷಿ ದಾವಾ ಆಸ್ತಿ ಸೇರ್ಪಡೆಯಾಗಿದೆ ಎಂದು ನುಡಿಯುತ್ತಾರೆ. ಸದರಿ ವಾಟ್ನಿ ಪತ್ರದ ಪ್ರಕಾರ ದಾವಾ ಆಸ್ತಿ ಎಲ್ಲರ ಹಿಸ್ಸೆಗೆ ಸಹ ಬಂದಿರುತ್ತದೆ. ಈ ದಾವೆ ಸಲ್ಲಿಸಬೇಕಾದರೆ ಅದರ ಉತಾರವನ್ನು ನನ್ನ ಅಣ್ಣ ತೆಗೆಯಿಸಿ ಕೊಟ್ಟಿದ್ದ. ನಿಪಿ.1 ಪಹಣಿ ಪತ್ರಕ್ಕೆ ಪ್ರತಿವಾದಿ ನಂ.4 ಇವರ ಹೆಸರಿನಲ್ಲಿದೆ ಎಂದರೆ ಸರಿ. ನನ್ನ ಸಹೋದರರು ಮಾಡಿಕೊಂಡ ವಾಟ್ನಿ ಪತ್ರವನ್ನು ಪ್ರಶ್ನೀಸಿ ನಾನು ಎಲ್ಲಿಯೂ ದಾವೆ ಸಲ್ಲಿಸಿಲ್ಲ ಎಂದರೆ ಸರಿ. ನನ್ನ ತಂದೆ ಮಾಡಿಕೊಟ್ಟ ವಾಟ್ನಿ ಪತ್ರದ ಪ್ರಕಾರ ಅವರವರ ಪಾಲಿಗೆ ಬಂದ ಆಸ್ತಿಗಳು ಅವರ ಹೆಸರಿನಲ್ಲಿವೆ. ನನ್ನ ತಂದೆಯ ಆಸ್ತಿಯಲ್ಲಿ ಹಿಸ್ಸೆ ಇದೆ ಎಂದು ಕೇಳಿ ನಾನು ಇದುವರೆಗೂ ಯಾವುದೇ ದಾವೆ ಸಲ್ಲಿಸಿಲ್ಲ.

7. ಹುಬ್ಬಳ್ಳಿ ಬಿಡ್ನಾಳಗೆ ಹತ್ತಿಕೊಂಡು ಇರುವ ಕಚ್ಚಿ ಹಾಲ್ ಆಸ್ತಿ ನಮ್ಮ ಕುಟುಂಬಕ್ಕೆ ಸಂಬಂಧಿಸಿದ್ದು ಎಂದರೆ ಸರಿ. ಸದರಿ ಆಸ್ತಿಗೆ ಸಂಬಂಧಿಸಿದಂತೆ ಯಾವುದೇ ದಾವೆ ಆಗಿರುವುದಿಲ್ಲ.

(**ಮುಂದುವರೆದ ಪಾಟೀ ಸವಾಲುಃ ಮುಂದುವರೆದ ಪಾಟಿ ಸವಾಲಿಗೆ 4 ಮತ್ತು 5 ನೇ ಪ್ರತಿವಾದಿಗಳ ಪರ ಶ್ರೀ. ಎಂ ಎಸ್ ಬಿ ವಕೀಲರು ಸಮಯಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು**).

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ ಹೇ ಕೆ ಸರಿ ಇದೆ.

Sd/-

**2 ನೇ ಅಧಿಕ ಹಿ.ದಿ.ನ್ಯಾ.ಹುಬ್ಬಳ್ಳಿ.**